ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ-4,
ವಾಣಿಜ್ಯ ತೆರಿಗೆ ಕಾರ್ಯಾಲಯ-2, 4ನೇ ಮಹಡಿ, ಎ-ಬ್ಲಾಕ್, ಕೊಠಡಿ ಸಂಖ್ಯೆ:401, ಕೋರಮಂಗಲ,
ಬೆಂಗಳೂರು-560047 ದೂರವಾಣಿ: 080-25704833 ಫ್ಯಾಕ್ಸ್ 080-25703822

TWO/29/4/14-15

ಸಂಖ್ಯೆ:ಜೆಸಿಸಿಟಿ/ಡಿವಿಓ-4/ಸಿಬ್ಬಂದಿ/ಸ್ಕ್ರಾಪ್/ಸಿಆರ್-1/2014-15 ದಿನಾಂಕ: 23-12-2014.

## ಸಾಮಾನ್ಯ ಟೆಂಡರ್ ಪ್ರಕಟಣೆ

ವಿಷಯ: ಈ ವಿಭಾಗದಲ್ಲಿನ ಉಪಯೋಗಕ್ಕೆ ಬಾರದ ಪೀಠೋಪಕರಣಗಳು ಹಾಗೂ ಸರ್ಕಾರಿ ವಾಹನದ ದುರಸ್ಥಿ ನಂತರದ ಬಿಡಿ ಭಾಗಗಳು ಇನ್ನಿತರ ವಸ್ತುಗಳನ್ನು ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ಹರಾಜು ಮಾಡುವ ಕುರಿತು.

ಉಲ್ಲೇಖ: 1. ಈ ಕಚೇರಿ ಪತ್ರ ಸಂ:ವಾತೆಜಂಆ(ಆ)/ಮೌ.ತೆ.ವಿ-4/1997/14-15 ದಿ:6.11.2014.

2. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂ.ಕ)-2, ಬೆಂಗಳೂರು ರವರ ಪತ್ರ ಸಂ:ಎಫ್.ಡಿ.ಎಸ್/ಇತರೆ-01/12-13 ದಿ:8.12.2014.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟ ಈ ವಿಭಾಗದಲ್ಲಿರುವ ಅನುಪಯುಕ್ತ ವಸ್ತುಗಳಿಂದ ಸ್ಥಳಾವಕಾಶ ಮತ್ತು ಸ್ವಚ್ಛತೆಗೆ ತೊಂದರೆಯುಂಟಾಗಿರುತ್ತದೆ. ಆದಕಾರಣ ಉಪಯೋಗಕ್ಕೆ ಬಾರದ (ಸ್ಕ್ರಾಪ್) ಕಚೇರಿ ಪೀಠೋಪಕರಣ, ಸರ್ಕಾರಿ ವಾಹನದ ದುರಸ್ಥಿ ನಂತರ ಬಿಡಿ ಭಾಗಗಳು, ಟೈರ್‌ಗಳು ಇನ್ನಿತರ ಉಪಯೋಗಕ್ಕೆ ಬಾರದ ವಸ್ತುಗಳನ್ನು (ಪ್ರತ್ಯೇಕ ಪಟ್ಟಿಯಲ್ಲಿ ವಿವರ ನೀಡಲಾಗಿದೆ) ವಿಲೇವಾರಿ ಮಾಡಲು ಉಲ್ಲೇಖ-1ರಲ್ಲಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಸಂಚಲನ) ಇವರ ಮೂಲಕ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ) ಬೆಂಗಳೂರು ರವರಿಗೆ ಮನವಿ ಮಾಡಲಾಗಿತ್ತು. ಅದರಂತೆ ಉಲ್ಲೇಖ-2ರ ಪತ್ರದಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆ ನಡೆಸಿ ವಿಲೇವಾರಿ ಮಾಡಲು ಅನುಮತಿ ನೀಡಿರುತ್ತಾರೆ. ಆದಕಾರಣ ಈ ಪತ್ರಕ್ಕೆ ಲಗತ್ತಿಸಲಾದ ಉಪಯೋಗಕ್ಕೆ ಬಾರದ ಸರಕುಗಳನ್ನು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಸಾಮಾನ್ಯ ಟೆಂಡರ್ ಪ್ರಕಟಣೆಗಳ ಮೂಲಕ ವಿಲೇವಾರಿ ಮಾಡಲು ಈ ಮೂಲಕ ತೀರ್ಮಾನಿಸಿದ್ದು ತತ್ಸಬಂದವಾಗಿ ಸಾಮಾನ್ಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

ನಿಬಂಧನೆಗಳು:- 1. ಕಚೇರಿ ವೇಳೆಯಲ್ಲಿ ಸರಕುಗಳನ್ನು ಪರಿಶೀಲಿಸಬಹುದಾಗಿದೆ.

2. ಟೆಂಡರ್ ಸಮಯದಲ್ಲಿ ಅತಿ ಹೆಚ್ಚು ಬಿಡ್ ಮಾಡಿದ ವರ್ತಕರು ಸಂಪೂರ್ಣ ಬಿಡ್ ಮೊತ್ತವನ್ನು ಆ ದಿನವೇ ಪಾವತಿಸಿ, ಪುನ: ಆ ದಿನವೇ ಸರಕನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ.

3. ಸದರಿ ಸರಕಿಗೆ ಶೇ.5.5 ರಷ್ಟು ಕರ್ನಾಟಕ ಮೌಲ್ಯವರ್ಧಿತ ಕಾಯ್ದೆಯಡಿ 2003ರ ಪ್ರಕಾರ ತೆರಿಗೆಯನ್ನು ಪಾವತಿ ಮಾಡಬೇಕಾಗುತ್ತದೆ.

Scanned by CamScanner

4. ಸದರಿ ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ–4, ಬೆಂಗಳೂರುರವರಿಗೆ ಅಧಿಕಾರವಿರುತ್ತದೆ.
5. ಟೆಂಡರ್ ಕಡೆಯ ದಿನಾಂಕ: 5/1/2015.
6. ಸಾಮಗ್ರಿಗಳ ಪರಿಶೀಲನೆಯ ಸಮಯ ಬೆಳಿಗ್ಗೆ 10.00ರಿಂದ 1.00 ಗಂಟೆಗೆ.
7. ಬಹಿರಂಗ ಹರಾಜು ಪ್ರಕ್ರಿಯೆ ಮಧ್ಯಾಹ್ನ 3.00 ಗಂಟೆಗೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ಮೌಲ್ಯವರ್ಧಿತ ತೆರಿಗೆ ವಿಭಾಗ–4,
ಕೋರಮಂಗಲ, ಬೆಂಗಳೂರು–560047

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು,
(ಆಡಳಿತ) ವಿ.ಮೌ.ತೆ. ಕಛೇರಿ–4, ಬೆಂಗಳೂರು

ಪ್ರತಿಯನ್ನು ಬೆಂಗಳೂರಿನ ಎಲ್ಲಾ ವಿಭಾಗೀಯ ಕಚೇರಿಗಳ ಸೂಚನಾ ಫಲಕಕ್ಕೆ ಕಳುಹಿಸಲಾಗಿದೆ.

Scanned by CamScanner

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)

## ಅನುಬಂಧ

| Sl. No. | Item | Nos., |
|---|---|---|
| 1 | "S" type chair wiring | 9 |
| 2 | "S" type chair wooden | 9 |
| 3 | Steel Table | 9 |
| 4 | Wooden Table | 13 |
| 5 | Steel Racks | 2 small & big |
| 6 | Typing Machine | 6 |
| 7 | Computer | 6 |
| 8 | Keyboard & Adaptor | 4 |
| 9 | Tappal Tray | 3 |
| 10 | Cash Box Iorn (Chest) | 3 |
| 11 | Aluminium Door | 2 |
| 12 | Wood pieces | 10 |
| 13 | Revolving Chair | 1 |
| 14 | Aluminium Particles | 16 Pieces |
| 15 | Steel Chair | 3 |
| 16 | Steel Almirah | 3 |
| 17 | Glass Pieces | 2 Feet |
| 18 | "S" type Chair | 3 |
| 19 | Plastic Chair | 2 |
| 20 | Water Filter Steel | 3 |
| 21 | Steel CV documents Almirah | 1 |
| 22 | Wooden Name Board | 1 |
| 23 | Air Conditioner Old | 1 |
| 24 | Old Printing Machine big (Lipi) | 2 |
| 25 | Revolving chair parts | 3 |
| 26 | Wooden Chair | 1 |
| 27 | Tyre | 6 |
| 28 | Wooden Press | 4 |
| 29 | Stensil Maching | 1 |
| 30 | Electrical Battery | 2 |
| 31 | Vehicle Engine Parts | — |
| 32 | Chair Wheel | 1 |
| 33 | Old Rocks pieces | 4 |
| 34 | Old News Papers | — |

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಮೌಲ್ಯವರ್ಧಿತ ತೆರಿಗೆ ಕಾರ್ಯಾಲಯ ಬೆಂಗಳೂರು
ಬೆಂಗಳೂರು.

Scanned by CamScanner